ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರ ಪಟ್ಟಿಗಳು

ಮಂಗಳೂರು ಹಳೆಯ ಬಂದರಿನ ಬಳಿ ಸಾಕಷ್ಟು ಆಳ ಇಲ್ಲದಿರುವುದು

೧೩೨೨. ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಮಂಗಳೂರು).—ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಹಳೆಯ ಮಂಗಳೂರು ಬಂದರಿನ ಅಳಿವೆಯಲ್ಲಿ, ವಿಹಾರಿಗಾರಿಕಾ ದೋಣಿಗಳು ಸಮುದ್ರದ ಒಳಗೆ ಮತ್ತು ಹೊರಗೆ ಹೋಗಿ ಬರಲು ಬೇಕಾದ ನೀರಿನ ಆಳ, ಹಳೆಯ ಮಂಗಳೂರು ಬಂದರಿನಲ್ಲಿ ಇಲ್ಲವೆಂಬ ವಿಷಯದ ಅರಿವು ಸರ್ಕಾರಕ್ಕೆ ಇದೆಯೇ ?

ಆ) ಅದರ ಅರಿವಿದ್ದಲ್ಲಿ, ಅಳಿವೆಯಲ್ಲಿ ಹೂಳೆತ್ತುವ ಬಗ್ಗೆ ಸರ್ಕಾರವು ತೆಗೆದುಕೊಂಡ ಕ್ರಮಗಳೇನು ?

ಇ) ಹೂಳೆತ್ತುವ ಕಾರ್ಯವು ಆವಾಗ ಪ್ರಾರಂಭವಾಗುವುದು ?

ಶ್ರೀ ಎಂ. ರಘುಪತಿ (ಬಂದರು ಮತ್ತು ವಿಹಾರಿಗಾರಿಕಾ ಸಚಿವರು).—

ಅ) ಇದೆ.

ಆ) ಅಳಿವೆಯಲ್ಲಿ ಹೂಳೆತ್ತುವ ಬಗ್ಗೆ ಸರ್ಕಾರವು ವಿವಿಧ ತಾಂತ್ರಿಕ ತಜ್ಞರ ಮತ್ತು ಸಂಸ್ಥೆಗಳ ಸಲಹೆಗಳನ್ನು ಪಡೆದು ಈ ಕಾರ್ಯವನ್ನು ಆದಷ್ಟು ಶೀಘ್ರವಾಗಿ ಪೂರ್ಣಗೊಳಿಸಲು ಪ್ರಯತ್ನಿಸುತ್ತಿದೆ. ಅಳಿವೆಯಲ್ಲಿ ಹೂಳೆತ್ತುವ ಕಾರ್ಯವು ಸುಗಮವಾಗುವಂತೆ, ಮತ್ತು ಹೂಳೆತ್ತಿದ ಸ್ಥಳದಲ್ಲಿ ಪುನಃ ಆದೇ ರೀತಿ ಹೂಳು ತುಂಬುವುದಂತೆ ನದಿಯ ನೀರು ಕ್ರಮಬದ್ಧವಾಗಿ ಅಳಿವೆ ಮುಖಾಂತರ ಸಮುದ್ರಕ್ಕೆ ಸೇರುವಂತೆ ನಿಯಂತ್ರಿಸಲು ಬೇಕಾದ ೬ ಸ್ಪರ್ಸ್‌ಗಳನ್ನು ಈಗಾಗಲೇ ಕಟ್ಟಲಾಗಿದೆ. ೨ ಬ್ರೇಕ್‌ವಾಟರ್‌ಗಳ ನಿರ್ಮಾಣದ ಬಗ್ಗೆ ಮಾದರಿ ಅಧ್ಯಯನ ಕೇಂದ್ರಿಯ ಜಲ ಮತ್ತು ವಿದ್ಯುತ್ ಸಂಶೋಧನಾಲಯದಲ್ಲಿ ನಡೆಯುತ್ತಿದ್ದು, ವಿವರಗಳು ದೊರೆತ ಕೂಡಲೇ ನಿರ್ಮಾಣ ಕಾರ್ಯವನ್ನು ಕೈಗೆತ್ತಿಕೊಳ್ಳಲಾಗುವುದು. ಹೂಳೆತ್ತುವ ಕೆಲಸಕ್ಕಾಗಿ ಟೆಂಡರುಗಳನ್ನು ಕರೆಯಲಾಗಿ ಮೆ.ಬೋಸ್ ಡ್ರೆಜಿಂಗ್ ಸರ್ವಿಸಸ್ (ಪಿ) ಲಿಮಿಟೆಡ್ ಇವರ ಟೆಂಡರನ್ನು ಒಪ್ಪಿಕೊಳ್ಳಲಾಗಿದೆ.

ಇ) ಹೂಳೆತ್ತುವ ಕಾರ್ಯವು ಸಧ್ಯದಲ್ಲಿ ಪ್ರಾರಂಭವಾಗುವುದು.

ಶಾಲೆಗಳಲ್ಲಿ ಹಾಗೂ ಮಹಾವಿದ್ಯಾಲಯಗಳಲ್ಲಿ ಖಾಲಿ ಇರುವ ಹುದ್ದೆಗಳು

೧೩೨೩. ಶ್ರೀ ಆರ್. ವೆಂಕಟರಾವಯ್ಯ (ಮಳಖೇಡ) ಆರ್. ಎನ್. ನಾಯಕ್ (ಭಟ್ಕಳ್) ಮತ್ತು ಎ.ವೀರಯ್ಯ ಸ್ವಾಮಿ (ಚಿಂಚೋಳಿ).—ಮಾನ್ಯ ಪ್ರಾಥಮಿಕ ಹಾಗೂ ಮಾಧ್ಯಮಿಕ ಶಿಕ್ಷಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸರ್ಕಾರೀ ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ಖಾಲಿ ಇರುವ ಶಿಕ್ಷಕರ ಮತ್ತು ಸರ್ಕಾರಿ ಕಿರಿಯ ಕಾಲೇಜುಗಳಲ್ಲಿ ಖಾಲಿ ಇರುವ ಉಪನ್ಯಾಸಕರ ಸಂಖ್ಯೆ (ಜಿಲ್ಲಾವಾರು ಪೂರಿತಿಯನ್ನು ನೀಡುವುದು.)

ಆ) ಒಂದು ತಿಂಗಳಿಗಿಂತಲೂ ಹಿಂದೆಯೇ ಶಾಲೆಗಳು ಪ್ರಾರಂಭಗೊಂಡಿದ್ದರೂ ನೇಮಕಾತಿ ಸಮಿತಿಯ ರಚನೆಯಲ್ಲಿ ತೊಡಕುಂಟಾಗಿರುವುದರಿಂದ ಈ ಖಾಲಿ ಹುದ್ದೆಗಳು ಭರ್ತಿಯಾಗದೇ ಉಳಿದಿರುವುದು ನಿಜವೇ ?

ಇ) ಹಾಗಿದ್ದಲ್ಲಿ, ನೇಮಕಾತಿ ಸಮಿತಿಯನ್ನು ರಚಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳಾವುವು ?

ಈ) ೧೯೮೬–೮೭ನೇ ಇಸವಿಯಲ್ಲಿ ಸಂದರ್ಶನಕ್ಕೆ ಕರೆಯದೆ ನೇರ ನೇಮಕಾತಿ ಯಾವುದಾದರೂ ಮಾಡಲಾಗಿದೆಯೇ ? ಹಾಗಿದ್ದಲ್ಲಿ ಅಂತಹ ಎಷ್ಟು ನೇಮಕಾತಿಗಳನ್ನು ಮಾಡಲಾಗಿದೆ ?